

## ನಟರಾಜನ ನರ್ತನ

ರಾಜ್ಯದ ಬಾದಾಮಿ ಗುಹೆಗಳು ಅದ್ಭುತವಾದ ವಾಸ್ತುಶೈಲಿ, ಶಿಲ್ಪಕಲೆಗೆ ಪ್ರಸಿದ್ಧವಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಭವ್ಯ ಇತಿಹಾಸ ಹೊಂದಿರುವ ಈ ಗುಹೆಗಳು 6 ರಿಂದ 8ನೇ ಶತಮಾನಗಳಲ್ಲಿ ನಿರ್ಮಾಣವಾಗಿವೆ. ಶಿಲಾಸ್ತಂಭಗಳ ಮುಖಮಂಟಪ, ಮಹಾಮಂಟಪ ಮತ್ತು ಗರ್ಭಗೃಹಗಳಿರುವ ಈ ಗುಹಾ ಸಂಕುಲವನ್ನು ಕೆಂಪು ಮರಳುಗಲ್ಲನ್ನು ಕೊರೆದು ನಿರ್ಮಿಸಲಾಗಿದೆ. ಇಲ್ಲಿರುವ ಅನೇಕ ಶಿಲ್ಪಗಳಲ್ಲಿ ನಟರಾಜನ ಶಿಲ್ಪವಂತೂ ತನ್ನದೇ ಆದ ಮಹತ್ವ ಹೊಂದಿದೆ. ಒಂದನೇ ಗುಹೆಯ ಬಲಭಾಗದ ಗೋಡೆಯ ಮೇಲೆ ನೃತ್ಯದ ಭಂಗಿಯಲ್ಲಿರುವ ಈ ನಟರಾಜ, ಐದು ಅಡಿ ಎತ್ತರವಿದೆ. ಇದಕ್ಕೆ 18 ಕೈಗಳಿದ್ದು ಅವು 81 ನಾಟ್ಯಮುದ್ರೆಗಳನ್ನು ತೋರಿಸುತ್ತಿವೆ. ಈ ಶಿಲ್ಪವು ನಾಟ್ಯಪ್ರೇಮಿಗಳಿಗೆ ಮುದ್ರೆಗಳನ್ನು ತಿಳಿಸಿ ಕೊಡುವ ನಾಟ್ಯಶಾಸ್ತ್ರದ ಪುಸ್ತಕದಂತಿದೆ. ಮೇಲಿನೆರಡು ಕೈಗಳಲ್ಲಿ ಸರ್ಪವೂ, ಉಳಿದವುಗಳಲ್ಲಿ ಡಮರುಗ, ದೊಂದಿ, ತ್ರಿಶೂಲ, ಕೊಡಲಿ, ಜಪಮಣಿ, ಪಾಶ, ತ್ರಿಶೂಲ, ವೀಣೆ ಮುಂತಾದವುಗಳಿವೆ. ಸುಂದರವಾದ ಕೇಶವಿನ್ಯಾಸವನ್ನು ಹೊಂದಿದ ಹಸನ್ಮುಖಿಯಾದ ಶಿವನು ಕಮಲದ ಹೂವಿನ ಮೇಲೆ ಸಂತೋಷದಿಂದ ತಾಂಡವ ನೃತ್ಯವಾಡುತ್ತಿದ್ದರೆ, ಅದನ್ನು ನೋಡಿ ಗಣೇಶನೂ ಎದ್ದು ನಿಂತು ನರ್ತಿಸುತ್ತಿದ್ದಾನೆ. ಅವರೀರ್ವರ ನೃತ್ಯಕ್ಕೆ ತಂಡು ಎಂಬ ಸಂಗೀತಗಾರ ತ್ರಿಪುಷ್ಕರ ವಾದ್ಯವನ್ನು ನುಡಿಸುತ್ತಿದ್ದಾನೆ. ಪಕ್ಕದಲ್ಲಿ ನಂದಿಯು ತಲೆದೂಗುತ್ತಿದ್ದಾನೆ. ಆದ್ದರಿಂದ ಇದು ಅನನ್ಯವಾದ 'ಶಿವತಾಂಡವ ನೃತ್ಯ ಶಿಲ್ಪ'ವೆನಿಸಿದೆ.

—ಸೀತಾ ಎಸ್. ನಾರಾಯಣ, ಹರಿಹರ



## 'ಆನೆ ಕಲ್ಲು'

ಶಿವಮೊಗ್ಗದಿಂದ ಉಡುಪಿಗೆ ಹೋಗುವ ಮಾರ್ಗದಲ್ಲಿ ಆಗುಂಬೆಯ ಘಾಟಿ ಎದುರಾಗುತ್ತದೆ. ಘಾಟಿ ಭಾಗದಲ್ಲಿ, ಈ ಚಿತ್ರದಲ್ಲಿ ಕಂಡುಬರುವ ಕಲ್ಲುಬಂಡೆ ಎದ್ದು ಕಾಣುತ್ತದೆ. ಆಕಾರದ ರೂಪವಾಗಿ ಏನೋ ಆ ಬಂಡೆಯ ಮೇಲೆ 'ಆನೆಕಲ್ಲು' ಎಂದು ಬರೆಯಲಾಗಿದೆ. 'ಇಡೀ ಘಾಟಿಯು ಬಂಡೆಯ ಆಧಾರದ ಮೇಲೆನಿಂತಿದ್ದು, ಬಂಡೆ ಒಡೆದರೆ ಘಾಟಿಗೆ ಹಾನಿಯಾಗುತ್ತದೆ' ಎಂಬ ನಂಬಿಕೆಯಿದೆ. ಹಾಗೆಯೇ ಈ ಹೆಬ್ಬಂಡೆಯು ಭೂತಸ್ಥಾನವೆಂದು ಈ ಭಾಗದ ಹಿರಿಯರು ನಂಬುತ್ತಾರೆ. ನಂಬಿಕೆಗಳು ಏನೇ ಇರಲಿ, ಈ ಹೆಬ್ಬಂಡೆಯು ಸಂಚಾರ ಮಾಡುವ ಪ್ರಯಾಣಿಕರ ಗಮನ ಸೆಳೆಯುವುದಂತೂ ಸತ್ಯ.

—ತೈರೊಳ್ಳಿ ಮಂಜುನಾಥ ಉಡುಪ, ಮಂಡ್ಯ







## ಕಸುಬು.. ಪೂಜೆ!

ಹಳ್ಳಿಯ ಮೂಲೆಯಲ್ಲಿರುವ ನಮ್ಮ ಒಂಟಿ ಮನೆಗೆ ಚಾಕು, ಕತ್ತಿ ಸಾಣೆ ಹಿಡಿಯಲು ಯಂತ್ರವನ್ನು ಹೊತ್ತುಕೊಂಡು ಒಬ್ಬ ಯುವಕ ಬಂದದ್ದು ನೋಡಿ ನನಗೆ ಆಶ್ಚರ್ಯವಾಯಿತು. ಈಗಿನ ಯುವಕರೂ ಇಂತಹ ಕೆಲಸ ಮಾಡುತ್ತಿರುವುದು ಬಹಳ ವಿಶೇಷವಾಗಿ ಕಂಡಿತ್ತು. ಆ ಯುವಕ ತಂದಿದ್ದ ಯಂತ್ರದ ಮೇಲೆ 'ನಾನೊಬ್ಬ ವ್ಯಾಪಾರಸ್ಥ, ವ್ಯಾಪಾರ ನನ್ನ ಧರ್ಮ, ಸಾಣೆ ನನ್ನ ಕಸುಬು, ಪರಿಶ್ರಮ ನನ್ನ ಪೂಜೆ' ಎಂದು ಬರೆದಿದ್ದ ಫಲಕ ಹಾಕಲಾಗಿತ್ತು. ಕರ್ಮಯೋಗಿಯ ನಿಜವಾದ ಕಾಯಕವನ್ನು ಆ ಬರಹ ಸಾರುತ್ತಿತ್ತು. ಉತ್ತರಕರ್ನಾಟಕದಿಂದ ಕರಾವಳಿಗೆ ಬಂದು ತನ್ನ ಕುಲಕಸುಬನ್ನು ಪೂಜೆಯೆಂದೇ ಭಾವಿಸಿರುವ ಈ ಯುವಕ ಅಭಿನಂದನಾರ್ಹನಲ್ಲವೇ?

—ಬಿ. ಶೋಭಾ ಅರಸ, ಉಡುಪಿ